ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ: 513/2024

ಚಾಸಾ: 19 ಪ್ರಾಸಾ:7

ದಿನಾಂಕ: 22.04.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಯು ನಂದ ಕುಮಾರ್ |
| ತಂದೆಯ ಹೆಸರು | : | ವಸಂತ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ್ತ ಪಿ ಐ |
| ವಾಸ ಸ್ಥಳ | : | ಮಂಗಳೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು ಫೆಬ್ರವರಿ 2023 ರಿಂದ ಜುಲೈ 2024ರವರೆಗೆ ಕುಂದಾಪುರದಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 23-02-2024 ರಂದು ಈ ಪ್ರಕರಣದ ತನಿಖೆಯನ್ನು ಚಾಸಾ-17 ರವರಿಂದ ಪಡೆದುಕೊಂಡಿರುತ್ತೇನೆ. ಪ್ರಕರಣದಲ್ಲಿ ಮೃತರಾದ ಅಂತಯ್ಯ ಆಚಾರ್ಯ ರವರ ಶವಪಂಚನಾಮೆಯನ್ನು ಜರುಗಿಸುವಂತೆ ಚಾಸಾ-16 ಮತ್ತು 18 ರವರನ್ನು ಮಣಿಪಾಲದ ಆಸ್ಪತ್ರೆಗೆ ನೇಮಿಸಿ ಕಳುಹಿಸಿರುತ್ತೇನೆ.

ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ-3 ಮತ್ತು 4 ರವರ ಸಮಕ್ಷಮ ಪಂಚನಾಮೆಯನ್ನು ಚಾಸಾ-1ರವರು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 9 ರಿಂದ 10 ಗಂಟೆಯವರೆಗೂ ಜರುಗಿಸಿ ನಕ್ಷೆ ತಯಾರಿಸಿ ಫೋಟೋ ತೆಗೆದಿರುತ್ತೇನೆ. ನಂತರ ಠಾಣೆಗೆ ಬಂದು ಠಾಣಾ ಆವರಣದಲಿಲ ಇದ್ದ ಕೆಎಲ್-14-ಎಡಿ-2601 ಟೆಂಪೋ ವಾಹನದ ಪಂಚನಾಮೆಯನ್ನು ಚಾಸಾ-5 ಮತ್ತು 6 ರವರ ಸಮಯದಲ್ಲಿ ಜರುಗಿಸಿ ವಶಕ್ಕೆ ಪಡೆದಿರುತ್ತೇನೆ. ಕ್ರಮವನ್ನು 12-30 ರಿಂದ 1-30ರವರೆಗೂ ಜರುಗಿಸಿರುತ್ತೇನೆ. ನಂತರ ಸಾಕ್ಷಿದಾರರಾದ ಚಾಸಾ-2 ರವರನ್ನು ವಿಚಾರಿಸಿ ಹೇಳಿಕೆ ದಾಖಲಿಸಿರುತ್ತೇನೆ. ಆರ್ ಟಿ ಓ ರವರಿಗೆ ವಾಹನದ ನಿರೀಕ್ಷಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿಕೆ ಸಲ್ಲಿಸಿರುತ್ತೇನೆ.

ದಿ: 28-02-2024 ರಂದು ಆರೋಪಿ ಠಾಣೆಗೆ ಬಂದು ಶರಣರಾಗಿದ್ದು, ಆತನ ಮೇಲೆ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ನಂತರ ಚಾಸಾ-13ರವರ ಜಾಮೀನಿನ ಮೇರೆಗೆ ಬಿಡುಗಡೆ

ಮಾಡಿರುತ್ತೇನೆ. ನಂತರ ಆರ್ ಸಿ ಮಾಲೀಕರಾದ ಆರೋಪಿಗೆ ಐಎಂವಿ ಕಲಂ 133ರ ನೊಟೀಸು ಹೊರಡಿಸಿ ಉತ್ತರ ಪಡೆದಿರುತ್ತೇನೆ. ನಂತರ ವಾಹನವನ್ನು ಇಂಡಿಮಿನಿಟಿ ಬಾಂಡ್ ಮೂಲಕ ಬಿಡುಗಡೆ ಮಾಡಿರುತ್ತೇನೆ.

ದಿಃ 15-03-2024 ರಂದು ಐಎಂವಿ ವರದಿ ಮತ್ತು ಪಿಎಂ ವರದಿಯನ್ನು ಚಾಸಾ-14 ಮತ್ತು 15 ರವರಿಂದ ಸ್ವೀಕರಿಸಿ ತನಿಖೆಯನ್ನು ಪೂರೈಸಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿ 2 ರಿಂದ 4, 11 ಮತ್ತು 12 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-2(ಡಿ) ರಿಂದ 4(ಡಿ), 11(ಎ) ಮತ್ತು 12(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಐಎಂವಿ ಕಲಂ 133ರ ನೊಟೀಸು, ಉತ್ತರ ಹಾಗೂ ಇಂಡಿಮಿನಿಟಿ ಬಾಂಡನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-13 ರಿಂದ 15 ಎಂದು, ಸಾಕ್ಷಿ ಸಹಿಗಳನ್ನು ನಿಪಿ-13(ಎ) ರಿಂದ 15(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-6 ರಿಂದ 9 ರಲ್ಲಿ ವಾಹನದ ಫೋಟೋ, ನಿಪಿ-5 ರಲ್ಲಿ ಘಟನಾ ಸ್ಥಳವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಸ್ ಎಸ್ ಎನ್ ರವರಿಂದಃ**

ಕುಂದಾಪುರದಿಂದ ಉಡುಪಿಗೆ ಹೋಗುವ ಏಕ ಮುಖ ರಸ್ತೆಯ ಪೂರ್ವ ಎಡಭಾಗಕ್ಕೆ ಬರುತ್ತದೆ ಎಂದರೆ ಸರಿ. ಏಕ ಮುಖ ಸಂಚಾರದ ರಸ್ತೆ 20 ಅಡಿ ಅಗಲವಿರುತ್ತದೆ. ಅಪಘಾತವಾಗುವ ವೇಳೆಯಲ್ಲಿ ಟೆಂಪೋ ವಾಹನ ರಸ್ತೆಯ ಬಲಭಾಗದಲ್ಲಿ ಚಲಾಯಿಸುತ್ತಿತ್ತು, ಆ ಬಗ್ಗೆ ಪ್ರತ್ಯಕ್ಷದರ್ಶಿ ಇರುತ್ತಾರೆ. ಬಲಭಾಗದಲ್ಲಿ ಹೋಗುತ್ತಿದ್ದ ಬಗ್ಗೆ ಸಾಕ್ಷಿದಾರರ ಹೇಳಿಕೆಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳ ಪಶ್ಚಿಮದ ಅಂಚಿನಿಂದ 1 ಅಡಿ ಪೂರ್ವಕ್ಕೆ ಸಂಭವಿಸಿರುತ್ತದೆ ಎಂದರೆ ಸರಿ. ವ್ಯಕ್ತಿ ರಸ್ತೆ ದಾಟುತ್ತಿದ್ದಾಗ ಅಪಘಾತವಾಗಿರುವುದು ಎಂದರೆ ಸರಿ. ಪಾದಚಾರಿ ಏಕಾಏಕಿ ವಾಹನವನ್ನು ಗಮನಿಸದೆ ರಸ್ತೆ ದಾಟಲು ಮುಂದಾದ ಕಾರಣ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ.

ಗಾಯಾಳು ಏಕಾಏಕಿ ವಾಹನವನ್ನು ಗಮನಿಸದೆ ರಸ್ತೆ ದಾಟಿದ ಕಾರಣ ಅಪಘಾತ ಸಂಭವಿಸಿದ್ದು ಅದರಲ್ಲಿ ಆರೋಪಿಯ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೀಡಾದ ವ್ಯಕ್ತಿಯ ಕುಟುಂಬದವರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿಯ ವಿರುದ್ದ ಅಪಾದಿಸಿರುತ್ತೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಭೇಟಿ ನೀಡಿ ದಾಖಲೆಗಳನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ.

ಎಲ್ಲಾ ದಾಖಲಾತಿಗಳನ್ನು ಠಾಣೆಯಲ್ಲಿ ಸೃಷ್ಟಿಸಿ ಸಾಕ್ಷಿದಾರರ ಸಹಿಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**